# ಶ್ರೀ ಗುರುಭ್ಯೋ ನಮ:

## ಗುರುಪರಂಪರಾಸ್ಮರಣೆ

ಗುರು ಮಧ್ವ ರಾಯರಿಗೆ ನಮೋ ನಮೋ| ನಮ್ಮ **(1) (1)**

ಗುರು ಮಧ್ವ ಸಂತತಿಗೆ ನಮೋ ನಮೋ|| **(1) (1)**

ಶ್ರೀಪಾದರಾಜರಿಗೆ ಗುರು ವ್ಯಾಸರಾಜರಿಗೆ| **(2)**

ಗುರು ವಾದಿರಾಜರಿಗೆ ನಮೋ ನಮೋ|| ನಮ್ಮ **(1)**

ರಾಘವೇಂದ್ರರಾಯರಿಗೆ ವೈಕುಂಠದಾಸರಿಗೆ| **(2)**

ಪುರಂದರದಾಸರಿಗೆ ನಮೋ ನಮೋ|| ನಮ್ಮ **(1)**

ಗುರು ವಿಜಯದಾಸರಿಗೆ ಭಾಗಣ್ಣದಾಸರಿಗೆ| **(2)**

ರಂಗವೊಲಿದದಾಸರಿಗೆ ನಮೋ ನಮೋ|| ನಮ್ಮ **(1)**

ಪರಮ ವೈರಾಗ್ಯಶಾಲಿ ತಿಮ್ಮಣ್ಣದಾಸರಿಗೆ |    (2)

ಹುಂಡೇಕಾರ ದಾಸರಿಗೆ ನಮೋ ನಮೋ || ನಮ್ಮ  (1)

ಗುರುಶ್ರೀಶವಿಠಲನ ಪರಮಭಕ್ತರಚರನ|   (2)

ಸರಸಿಜಯುಗಗಳಿಗೆ ನಮೋ ನಮೋ|| ನಮ್ಮ  (2)

# ದೇವತಾ ಸ್ತೊತ್ರ

ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ

ಮತಿಪ್ರೇರಿಸುವಳು ಪಾರ್ವತೀದೇವಿ

ಮುಕುತಿಪದವೀವ ಮನ ಮಹರುದ್ರದೇವರು

ಹರಿಭಕುತಿದಾಯಕಳು ಭಾರತೀದೇವೀ

ಯುಕುತಿಶಾಸ್ತ್ರಗಳಲ್ಲಿ ವನಜಸಂಭವನರಸಿ

ಸತ್ಕರ್ಮಗಳ ನಡೆಸಿ ಸುಜ್ಞಾನಮತಿಯಿತ್ತು

ಗತಿ ಪಾಲಿಸುವ ನಮ್ಮ ಪವಮಾನನು |

ಚಿತ್ತದಲಿ ಆನಂದಸುಖವನೀವಳು ರಮಾ

ಭಕುತಜನರೊಡೆಯ ನಮ್ಮ ಪುರಂದರವಿಠ್ಠಲನು

ಸತತ ಇವರೊಳು ನಿಂತು ಈ ಕೃತಿಯ ನಡೆಸುವನು ||

# ಶ್ರೀ ರಾಘವೇಂದ್ರಗುರುಸಾರ್ವಭೌಮರು

1. ಬಾರೋ ಗುರುರಾಘವೇಂದ್ರ

ಬಾರೋ ಗುರುರಾಘವೇಂದ್ರ (1) (1)

ಬಾರಯ್ಯ ಬಾ ಬಾ (1)

ಹಿಂದುಮುಂದಿಲ್ಲೆನಗೆ ನೀ ಗತಿ

ಎಂದು ನಂಬಿದೆ ನಿನ್ನ ಪಾದವ

ಬಂಧನವ ಬಿಡಿಸೆನ್ನ ಕರಪಿಡಿ

ನಂದಕಂದ ಮುಕುಂದ ಬಂಧೋ || ಬಾರೋ

ಸೇವಕನೆಲೋ ನಾನು ಧಾವಿಸಿ ಬಂದೆನು

ಸೇವೆಯ ನೀಡೆಲೋ ನೀನು

ಸೇವಕನ ಸೇವೆಯನು ಸೇವಿಸಿ

ಸೇವ್ಯಸೇವಕ ಭಾವವೀಯುತ

ಠಾವುಗಾಣಿಸಿ ಪೊರೆಯೋ ಧರೆಯೋಳು

ಪಾವನಾತ್ಮಕ ಕಾವಕರುಣಿ

ಕರೆದರೆ ಬರುವೀಯೆಂದು ಸಾರುವುದು ಡಂಗುರ

ತ್ವರಿತದಿ ಒದಗು ಬಂದು

ಜರಿಯಬೇಡವೋ ಬರಿದೆ ನಿನ್ನಯ

ವಿರಹ ತಾಳದೆ ಮನದಿ ಕೊರಗುವೆ

ಹರಿಯಸ್ಮರಣೆಯ ನಿರುತದಲಿ

ಎನಗ್ಹರುಷದಲಿ ನೀ ನಿರುತ ಕೊಡುತಲಿ

ನರಹರಿಪ್ರಿಯನೇ ಬಾ ಗುರುಶ್ರೀಶವಿಠಲನ

ಕರುಣಾಪಾತ್ರನೇ ಬೇಗ ಬಾ

ಗುರುವರನೆ ಪರಿಪೋಷಿಸೆನ್ನನು

ಮರೆಯದೆಲೆ ತವ ಚರಣಕೋಟಿಯಲಿರಿಸಿ

ಚರಣಾಂಬುಜವ ತೋರುತ

ತ್ವರಿತದಲಿ ಓಡೋಡಿ ಬಾ ಬಾ

**2. ಜೀಯಾ ನೀನಲ್ಲದೆ ಇನ್ನಾರು ಕಾಯ್ವರೋ**

ಜೀಯಾ ನೀನಲ್ಲದೆ ಇನ್ನಾರು ಕಾಯ್ವರೋ |ಪ| **(2) (1)**

ರಾಯ ಬಾರೋ ರಾಘವೇಂದ್ರ ಬಾರೋ |ಅ.ಪ| **(2) (2)**

ಸಹ್ಲಾದನಣ್ಣನೆ ಬಾರೋ ಪ್ರಹ್ಲಾದ ರಾಯ ಬಾರೋ **(2)**

ಬಾಹ್ಲೀಕ ರಾಜನಾಗಿ ಮೆರೆವಂಥ ಪ್ರಭುವೆ ಬಾರೋ |೧| **(2)**

ತುಂಗವಾಸ ಮುನಿಪುಂಗವ ನೀ ಭಕ್ತ   (2)

ಜಂಗುಳಿ ಪಾಲಿಸಲು ಸಂಗೀತ ಪ್ರಿಯನೆ ಬಾರೋ |೨|   (2)

ಶ್ರೀಕರುಣಾಸಿಂಧು ಬಾರೋ ಸಾಕಬೇಕಯ್ಯಾ ಬಂದು   (2)

ಶ್ರೀಕರ ಶ್ರೀದವಿಠ್ಠಲನ ತೋರೊ ಬಾರೋ |೩|   (2)

3. ಬಂದಾನೋ ರಾಘವೇಂದ್ರ ಇಂದಿಲ್ಲಿಗೆ

ಬಂದಾನೋ ರಾಘವೇಂದ್ರ ಇಂದಿಲ್ಲಿಗೆ  (2) (1)

ಕಂದನ ಮೊರೆ ಕೇಳಿ ಜನನಿಯು ಬರುವಂತೆ  (2)

ಗಜವೇರಿ ಬಂದ ಜಗದಿತಾನಿಂದಾ |   (2)

ಅಜಪಿತರಾಮನ ಪಾದಾಬ್ಜ ಸ್ಮರಿಸುತಲಿ   (2)

ಹರಿಯ ಕುಣಿಸುತ ಬಂದಾ ರಾಘವೇಂದ್ರ, ನರಹರಿ ಪ್ರಿಯ ಬಂದ |   **(2)**

ಶರಣಾಗತರನು ಕರವ ಪಿಡಿವೆನೆಂದು   **(2)**

ಪ್ರಲ್ಹಾದ ವ್ಯಾಸ ಮುನೀಂದ್ರ ರಾಘವೇಂದ್ರ |   **(2)**

ನಿಲ್ಲಿಸುತ ಮನವ ಮಧ್ವೇಶ ವಿಠಲನಲ್ಲಿ ||  **(2)**

## 4. ರಾಘವೇಂದ್ರ ಗುರುರಾಯರ ಸೇವಿಸಿರೋ

ರಾಘವೇಂದ್ರ ಗುರುರಾಯರ ಸೇವಿಸಿರೋ |    **(1)  (1)**

ಸೌಖ್ಯದಿ ಜೀವಿಸಿರೋ ||ಪ||  **(1)**

ತುಂಗಾತೀರದಿ ರಘುರಾಮನ ಪೂಜಿಪರೋ | ನರಸಿಂಗರ ಭಜಕರೋ ||ಅ.ಪ||

ಶ್ರೀ ಸುಧೀಂದ್ರ ಕರ ಸರೋಜ ಸಂಜಾತ | ಜಗದೊಳಗೆ ಪುನೀತ |

ದಾಶರಥಿಯ ದಾಸತ್ವವ ತಾನ್ವಹಿಸಿ | ದುರ್ಮತಗಳ ಜಯಿಸಿ |

ಈ ಸಮೀರ ಮತ ಸಂಸ್ಥಾಪಕರಾಗಿ | ನಿಂದಕರನು ನೀಗಿ |

ಭೂಸುರರಿಗೆ ಸಂಸೇವ್ಯ ಸದಾಚರಣೀ | ಕಂಗೊಳಿಸುವ ಕರುಣಿ ||೧||

ಕುಂದದೆ ವರ ಮಂತ್ರಾಲಯದಲ್ಲಿರುವ | ಕರೆದಲ್ಲಿಗೆ ಬರುವ |

ವೃಂದಾವನಗತ ಮೃತ್ತಿಗೆ ಜಲ ಪಾನ | ಮುಕ್ತಿಗೆ ಸೋಪಾನ |

ಸಂದರ್ಶನ ಮಾತ್ರದಲಿ ಮಹತ್ಪಾಪ | ಬಡಿದೋಡಿಸಲಾಪ |

ಮಂದಭಾಗ್ಯರಿಗೆ ದೊರಕದಿರುವ ಸೇವಾ | ಶರಣರ ಸಂಜೀವಾ ||೨||

ಶ್ರೀದವಿಠ್ಠಲನ ಸನ್ನಿಧಾನ ಪಾತ್ರ | ಸಂಸ್ತುತಿಸುವ ಮಾತ್ರ |

ಮೋದಪಡಿಸುತಿಹ ತಾ ನಿಹಪರದಲ್ಲಿ | ಈತಗೆ ಸರಿಯೆಲ್ಲಿ |

ಮೇಧಿನಿಯೊಳಗಿನ್ನರಸಲು ನಾ ಕಾಣೆ | ಪುಸಿಯಲ್ಲೆನ್ನಾಣೆ |

ಪಾದಸ್ಮರಣೆಯ ಮಾಡದವನೆ ಪಾಪಿ | ನಾ ಪೇಳುವೆ ಸ್ಥಾಪಿ ||೩||

### 5. ತುಂಗಾ ತೀರದಿ ನಿಂತ

ತುಂಗಾ ತೀರದಿ ನಿಂತ ಸುಯತಿವರನ್ಯಾರೆ ಪೇಳಮ್ಮಯ್ಯ

ಸಂಗೀತ ಪ್ರಿಯ ಮಂಗಳ ಸುಗುಣಿ ತರಂಗ ಮುನಿಕುಲೋತ್ತುಂಗ ಕಣಮ್ಮ||

ಚೆಲುವ ಸುಮುಖ ಫಣೆಯಲ್ಲಿ ತಿಲಕ ನಾಮಗಳು ನೋಡಮ್ಮಯ್ಯ
ಜಲಜ ಮಣಿಯು ಕೊರಳಲ್ಲಿ ತುಳಸಿ ಮಾಲೆಗಳು ನೋಡಮ್ಮಯ್ಯ
ಸುಲಲಿತ ಕಮಂಡಲ ಢಂಡವನೆ ಧರಿಸಿಹನೆ ನೋಡಮ್ಮಯ್ಯ
ಕ್ಷುಲ್ಲ ಹಿರಣ್ಯಕನಲ್ಲಿ ಜನಿಸಿದ ಪ್ರಹ್ಲಾದನು ತಾನಿಲ್ಲಿಹನಮ್ಮ ||

ಸುಂದರ ಚರಣಾರವಿಂದ ಸುಭಕುತಿಯಲಿಂದ ನೋಡಮ್ಮಯ್ಯ
ವಂದಿಸಿ ಸ್ತುತಿಸುವ ಭೂಸುರರು ಭಲು ವೃಂಧ ನೋಡಮ್ಮಯ್ಯ
ಚಂದದಲಂಕ್ರುತಿ ಇಂದ ಶೋಭಿಸುವ ಆನಂದ ನೋಡಮ್ಮಯ್ಯ
ಹಿಂದೆ ವ್ಯಾಸಮುನಿ ಎಂದೆನಿಸಿದ ಕರ್ಮಂದಿಗಳರಸಘ-ದಿಂದ ರಹಿತನೆ

ಅಭಿನವ ಜನಾರ್ಧನ ವಿಠಲನ ಧ್ಯಾನಿಸುವಾ ನೋಡಮ್ಮಯ್ಯ
ಅಭಿವಂದಿಪರಿಗೆ ಅಖಿಲಾರ್ಥವ ಸಲ್ಲಿಸುವ ನೋಡಮ್ಮಯ್ಯ
ನಭಮಣಿಯಂಧದಿ ಭೂಮಿಯಲ್ಲಿ ರಾಜಿಸುವ ನೋಡಮ್ಮಯ್ಯ
ಶುಭಗುಣ ನಿಧಿ ಶ್ರೀ ರಾಘವೇಂದ್ರಯತಿ ಅಬುಜ ಭವಾಂಡದೊಳು ಪ್ರಭಲ
ಕಾಣಮ್ಮ

## 6. ರಥವಾನೇರಿದ ರಾಘವೇಂದ್ರ ಸದ್ಗುಣಗಣಸಾಂದ್ರಾ

ರಥವಾನೇರಿದ ರಾಘವೇಂದ್ರ ಸದ್ಗುಣಗಣಸಾಂದ್ರಾ ||ಪ||

ಸತತ ಮಾರ್ಗದಿ ಸಂತತ ಸೇವಿಪರಿಗೆ (2)
ಅತಿಹಿತದಲಿ ಮನೋರಥವ ಕೊಡುವೆನೆಂದು ||ಅ.ಪ|| (1)

ಚತುರ ದಿಕ್ಕು ದಿಕ್ಕುಗಳಲ್ಲಿ ಚರಿಪ ಜನರಲ್ಲಿ (2)
ಮಿತಿಯಿಲ್ಲದೆ ಬಂದೋಲೈಸುತಲಿ ವರವ ಬೇಡುತಲಿ (1)
ನುತಿಸುತ ಪರಿಪರಿ ನತರಾಗಿಹರಿಗೆ (2)
ಗತಿಪೇಳದೆ ಸರ್ವಥಾ ನಾ ಬಿಡೆನೆಂದು ||೧|| (1)

ಅತುಳ ಮಹಿಮನ ದಿನದಲ್ಲಿ ದಿತಿಜ ವಂಶದಲಿ (2)
ಉತ್ಪತ್ತಿಯಾಗಿ ಉಚಿತದಲ್ಲಿ ಉತ್ತಮ ರೀತಿಯಲಿ (1)
ಅತಿಶವಿರುತಿರೆ ಪಿತನ ಬಾಧೆಗೆ (2)

ಮನ್ಮಥಪಿತನೊಲಿಸಿದ ಜಿತಕರಣದಲಿ ||೨||   (1)

ಪ್ರಥಮ ಪ್ರಲ್ಹಾದ ವ್ಯಾಸಮುನಿಯೆ ಯತಿರಾಘವೇಂದ್ರ   (2)

ಪತಿತೋದ್ಧಾರಿಯೇ ಪಾವನಕಾರಿಯೆ ಕರಮುಗಿವೆನು ದೊರೆಯೇ   (1)

ಕ್ಷಿತಿಯೊಳು ಗೋಪಾಲವಿಠ್ಠಲನ ಸ್ಮರಿಸುತ   (2)

ಪ್ರತಿಮಂತ್ರಾಲಯದೊಳು ಅತಿ ಮೆರೆವ ||೩||   (1)

## ಶ್ರೀ ಪ್ರಾಣ ದೇವರು

ಪವಮಾನ ಜಗದಪ್ರಾಣಾ

ಪವಮಾನ ಜಗದಪ್ರಾಣಾ ಸಂಕರುಷಣ ||

ಭವ, ಭಯಾರಣ್ಯ ದಹನ || ಪ ||

ಶ್ರವಣವೆ ಮೊದಲಾದ ನವವಿಧ ಭಕುತಿಯ |

ತವಕದಿಂದಲಿ ಕೊಡು ಕವಿಜನ ಪ್ರಿಯಾ || ಅ ಪ ||

ಹೇಮಕಚ್ಚುಟ ಉಪವೀತ ಧರಿಪ ಮಾರುತ |

ಕಾಮಾದಿ ವರ್ಗರಹಿತ ||

ವ್ಯೋಮಾದಿ ಸರ್ವ ವ್ಯಾಪುತ ಸತತ ನಿರ್ಭೀತ |

ರಾಮಚಂದ್ರನ ನಿಜದೂತ ||

ಯಾಮ ಯಾಮಕೆ ನಿನ್ನಾರಾಧಿಪುದಕೆ |

ಕಾಮಿಪೆ ಎನಗಿದು ನೇಮಿಸಿ ಪ್ರತಿದಿನ |

ಈಮನಸಿಗೆ ಸುಖಸ್ತೋಮವ ತೋರುತ |

ಪಾಮರಮತಿಯನು ನೀ ಮಾಣಿಪುದು || ೧ ||

ವಜ್ರಶರೀರಗಂಭೀರ ಮುಕುಟಧರ |

ದುರ್ಜನ ವನಕುಠಾರಾ |

ನಿರ್ಜರ ಮಣಿ ದಯಾ ಪಾರವಾರ ಉದಾರ |

ಸಜ್ಜನರಘಪರಿಹಾರಾ ||

ಅರ್ಜುನಗೊಲಿದಂದು ಧ್ವಜವಾನಿಸಿ ನಿಂದು |

ಮೂರ್ಜಗವರಿವಂತೆ ಗರ್ಜನೆ ಮಾಡಿದೆ |

ಹೆಜ್ಜೆ ಹೆಜ್ಜೆಗೆ ನಿನ್ನ ಅಬ್ಜಪಾದದ ಧೂಳಿ |

ಮಾರ್ಜನದಲಿ ಭವವರ್ಜಿತನೆನಿಸಿಸೊ || ೧ ||

ಪ್ರಾಣ ಅಪಾನವ್ಯಾನೋದಾನ ಸಮಾನಾ |

ಆನಂದಭಾರತಿ ರಮಣಾ |

ನೀನೇ ಶರ್ವಾದಿಗೀರ್ವಾಣಾದ್ಯಮರರಿಗೆ

ಜ್ಞಾನಧನಪಾಲಿಪವರೇಣ್ಯ |

ನಾನು ನಿರುತದಲಿ ಏನೇನೆಸಗಿದೆ ||

ಮಾನಸಾದಿ ಕರ್ಮ ನಿನಗೊಪ್ಪಿಸಿದೆನೊ |

ಪ್ರಾಣನಾಥ ಸಿರಿವಿಜಯ ವಿಠಲನ |

ಕಾಣಿಸಿಕೊಡುವದು ಭಾನುಪ್ರಕಾಶಾ || ೨ ||

# ಶ್ರೀ ಲಕ್ಷ್ಮಿ

ವೆಂಕಟಾದ್ರಿ ನಿಲಯನ ಪಂಕಜನಾಭನ ತೋರವ್ವ ಲಕುಮಿ (2) (1)

ವಸುದೇವ ದೇವಕಿ ಕಂದಾ ನಮ್ಮ ಶಶಿಮುಖಿಯರೊಡನೆ ಆನಂದ (2)

ಪಶುಗಳ ಕಾಯ್ದ ಗೋವಿಂದ ಬಿಸಜನಾಭ ಮುಕುಂದ ನಮ್ಮ (2)

ಸಮಜರಾಜನ ವರದ ಬಲು ಪ್ರೇಮದಿ ಭಕುತರ ಪೊರೆದಾ (2)

ಆ ಮಹದಿತಿಜರ ತರಿದಾ ನಿಸ್ಸೀಮ ಮಹಿಮನಾಗಿ ಮೆರದ ನಮ್ಮ (2)

ಉರಗ ಗಿರಿಯಲಿಪ್ಪಾ ಅಂದು ಮರುತನ ಪೆಗಲೇರಿ ಬಪ್ಪ (2)

ಶರಣರಿಗೊರವೀಯುತಿಪ್ಪಾ ಸಿರಿ ಮೊಹನ್ನ ವಿಠ್ಠಲ ತಿಮ್ಮಪ್ಪ ನಮ್ಮ (2)

# ಶ್ರೀ ಹರಿ

1. ಶರಣು ನಿನಗೆ

ಶರಣು ನಿನಗೆ ಶರಣೆಂಬೆನು ವಿಠಲ |    (1) (1)

ಕರುಣವಾರಿಧಿ ಎನ್ನ ಕಾಯೊ ವಿಠಲ  || ಪ ||  (1) (1)

ದಶರಥರಾಯನ ಉದರದಿ ವಿಠಲ |    (2)

ಶಿಶುವಾಗಿ ಉದಿಸಿದ್ಯೊ ಶ್ರೀರಾಮ ವಿಠಲ |   (2)

ಶಶಿಮುಖಿ ಗೋಪಿಯ ಕಂದನೆ ವಿಠಲ |   (2)

ಅಸುರೆ ಪೂತನಿಯ ಕೊಂದ್ಯೋ ಕೃಷ್ಣ ವಿಠಲ ||೧|| (2)

ಅರಸಿ ರುಗ್ಮಿಣಿಗೆ ನೀನರಸನಾದ್ಯೊ ವಿಠಲ |   (2)

ಪಿರಿದಾಗಿ ಶಂಖವ ಪಿಡಿದ್ಯೋ ನೀ ವಿಠಲ |   (2)

ಸರಸಿಜ ಸಂಭವ ಸನ್ನುತ ವಿಠಲ |    (2)

ನಿರತ ಇಟ್ಟಿಗೆ ಮೇಲೆ ನಿಂತ್ಯೋ ನೀ ವಿಠಲ ||೧||   (2)

ಕಂಡೆ ನಾ ನಿನ್ನ ವೇಂಕಟನೆಂಬ ವಿಠಲ |   (2)

ಪುಂಡ ಗೋಳಕರಿಗೊಲಿದು ಬಂದ ವಿಠಲ |   (2)

ಪಾಂಡುರಂಗ ಕ್ಷೇತ್ರಪಾಲನೆ ವಿಠಲ |   (2)

ಪುಂಡರೀಕಾಕ್ಷ ಶ್ರೀಪುರಂದರವಿಠಲ ||೨||   (2)

## 2. ನೆರೆ ನಂಬಿದೆ ಮದ್ ಹೃದಯ ಮಂಟಪದೊಳು

1) ನೆರೆನಂಬಿದೆ ಮದ್ ಹೃದಯ ಮಂಟಪದೊಳು
ಪರಿಶೋಭಿಸುತಿರು ಪಾಂಡುರಂಗ।
ಶರಣ ಜನರ ಸಂಸಾರ ಮಹಾಭಯ।
ಹರಣ ಕರುಣ ನಿಧಿ ಪಾಂಡುರಂಗ।

ಪರದೇವನೆ ನಿನ್ನ ಲೀಲಾ ಸ್ತುತಿಯನು।
ನಿರುತ ಎನಗೆ ಕೊಡು ಪಾಂಡುರಂಗ।
ಪರಮಾಪೇಕ್ಷೆಯ ತೋರಿಸಿ ನಿರಂತರ।
ಪರಗತಿ ಪಥ ತೋರೋ ಪಾಂಡುರಂಗ।

ನೆರೆದಿಹ ಬಹು ಜನರೊಳಿದ್ದರು।
ಮನಸ್ಥಿರವಿಡು ನಿನ್ನಲಿ ಪಾಂಡುರಂಗ।
ಪಂಢರಿ ಕೆಲಸಿಪ್ಪ ನಿನ್ನ ಮಹಾರೂಪ।
ನಿರುತ ಎನಗೆ ಕೊಡು ಪಾಂಡುರಂಗ।

ಸುಖವಾಗಲಿ ಬಹು ದುಃಖವಾಗಲಿ।
ಸಖ ನೀನಾಗಿರು ಪಾಂಡುರಂಗ।
ನಿಖಿಲಾಂತರಗತ ವ್ಯಾಪಕ ವಿಠಲ ದೇವ।
ಪಂಕಜ ಮುಖ ತೋರೋ ಪಾಂಡುರಂಗ।